# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 34/2025

**ಪಿ.ಡಬ್ಲ್ಯೂಃ7 (ಸಿಡಬ್ಲ್ಯೂಃ 8)**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಧರ್ಮ** |
| **ತಂದೆಯ ಹೆಸರು** | : | **ದೊಡ್ಡಮಲ್ಲಪ್ಪ** |
| **ವಯಸ್ಸು** | : | **36 ವರ್ಷ** |
| **ಕೆಲಸ** | : | **ವ್ಯವಸಾಯ** |
| **ವಾಸ ಸ್ಥಳ** | : | **ಕುರುವಳ್ಳಿ ಗ್ರಾಮ** |

**ಸಾಕ್ಷಿಯನ್ನು ದಿನಾಂಕ 11.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಫಿರ್ಯಾದಿದಾರ ಮೂಕಮ್ಮ ಮತ್ತು ಆಕೆಯ ಗಂಡ ಚಾಗಪ್ಪನ ಪರಿಚಯ ಇದೆ . ಆರೋಪಿಯ ಪರಿಚಯ ಇದೆ. ನಾವೆಲ್ಲರೂ ಒಂದೇ ಊರಿನವರು. ಫಿರ್ಯಾದಿದಾರರ ಮನೆ ನಮ್ಮ ಮನೆಯ ಮುಂದೆ ಇದೆ.

**2.** ದಿಃ27. 2.2025 ರಂದು ರಾತ್ರಿ ನಾನು ಮನೆಯಲ್ಲಿ ಮಲಗಿದ್ದಾಗ ರಾತ್ರಿ 10.30 ಗಂಟೆಗೆ ಗಲಾಟೆಯ ಶಬ್ದ ಕೇಳಿಸಿತು. ಮೂಕಮ್ಮ ಮತ್ತು ಆಕೆಯ ಗಂಡ ಆರೋಪಿಯು ಮದ್ಯಪಾನ ಮಾಡಿ ಬೈದಾಡುತ್ತಿದ್ದರಿಂದ ನಮ್ಮಮನೆಯ ಹತ್ತಿರ ಬರುವುದು ಬೇಡ, ಕೂಗಾಡುವುದು ಬೇಡ ಎಂದು ಹೇಳಿದಳು. ಆಗ ಆರೋಪಿಯು ನಾನು ಮತ್ತೆ ಬರುತ್ತೇನೆ

ಎಂದು ಹೇಳಿ ಹೋದನು. ನಂತರ ಪುನಃ ರಾತ್ರಿ 11.30 ಗಂಟೆಗೆ ಆರೋಪಿ ಫಿರ್ಯಾದಿದಾರರ ಮನೆಯ ಹತ್ತಿರ ಬಂದು ಗಲಾಟೆ ಮಾಡಿದನು. ಫಿರ್ಯಾದಿದಾರರ ಗಂಡ ಮೆಣಸಿನ ಕಾಯಿ ಮಾರಾಟ ಮಾಡಲು ಹೋಗಿದ್ದನು. ಮಕ್ಕಳು ಹಳೇಕೋಟೆಗೆ ಅವರ ಸಂಬಂಧಿಕರ ಮನೆಗೆ ಹೋಗಿದ್ದನು. ಆರೋಪಿಯು ಫಿರ್ಯಾದಿದಾರಳ ಮನೆಯ ಹತ್ತಿರ ಪುನಃ ಬಂದಾಗ ತನ್ನೊಂದಿಗೆ ಈಳಿಗೆ ಮಣೆಯನ್ನು ತಂದಿದ್ದು ಸದರಿ ಈಳಿಗೆ ಮಣೆಯಿಂದ ಮೂಕಮ್ಮಳಿಗೆ ಹೊಡೆಯಲು ಪ್ರಯತ್ನಿಸಿದನು. ಆಗ ಮೂಕಮ್ಮ ತನ್ನ ಎಡಕೈಯನ್ನು ಅಡ್ಡ ಹಿಡಿದಳು. ಆಗ ಆರೋಪಿಯು ಹೊಡೆದ ಹೊಡೆತವು ಆಕೆಯ ಎಡಕೈಗೆ , ಭುಜಕ್ಕೆ ಮತ್ತು ಕಣ್ಣಿನ ಉಬ್ಬಿಗೆ ಬಿತ್ತು.

**3.** ಕೂಡಲೇ ಮೂಕಮ್ಮನ ಬಂಧುಗಳಾದ ಚಾಸಾ.6 ಉಮೇಶ ಮತ್ತು ಚಾ.ಸ್ಾ7 ತರಸಾಲಪ್ಪ ಬಂದು ಬಿಡಿಸಿದರು. ಮೂಕಮ್ಮ ಗಾಯಗೊಂಡಿದ್ದು ಆಕೆಯನ್ನು ಸಿರುಗುಪ್ಪದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸಿರುಗುಪ್ಪದಲ್ಲಿ ಮೂಕಮ್ಮ ಒಂದು ದಿನ ಚಿಕಿತ್ಸೆ ಪಡೆದಿದ್ದಾಳೆ. ನಂತರ ವೈದ್ಯರು ಆಕೆಯನ್ನು ಹೆಚ್ಚಿನ ಚಿಕಿತ್ಸೆಗೆ ಬಳ್ಳಾರಿಯ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದ್ದಾರೆ. ಈ ಬಗ್ಗೆ ಮೂಕಮ್ಮ ಫಿರ್ಯಾದು ನೀಡಿರುತ್ತಾರೆ. ಆರೋಪಿ ಮೂಕಮ್ಮಳಿಗೆ ಹೊಡೆಯಲು ಉಪಯೋಗಿಸಿದ ಕತ್ತಿಯನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ಎಂಒ 2 ಎಂದು ಗುರುತಿಸಲಾಗಿದೆ. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್.ಆರ್.ಜೆಃ(ಎಲ್ ಎ ಡಿಸಿ) ವಕೀಲರಿಂದ:</u>**

**4.** ನನ್ನ ಮತ್ತು ಮೂಕಮ್ಮಳ ಮನೆಯ ಮಧ್ಯದಲ್ಲಿ 15 ಅಡಿ ಅಗಲದ ರಸ್ತೆ ಇದೆ ಎನ್ನುವುದು ಸರಿ . ಆರೋಪಿ ಮೂಕಮ್ಮಳಿಗೆ ಬೈಯ್ಯುವುದು ನನಗೆ ಕೇಳಿಸಲಿಲ್ಲ ಎನ್ನುವುದು

ಸರಿಯಲ್ಲ. ಗಲಾಟೆ ಶಬ್ದ ಕೇಳಿ ನಾನು ಎದ್ದು ನೋಡಿದೆ. ನಂತರ ಸ್ಥಳಕ್ಕೆ ಹೋದೆ. ನಾನು ಆರೋಪಿಯನ್ನು ಬೈದು ಕಳುಹಿಸಲಿಲ್ಲ. ಗಲಾಟೆಯು ಮನೆಯ ಹೊರಗೆ ಆಗಿದೆ. ರಸ್ತೆಯಲ್ಲಿ ಗಲಾಟೆ ಆದರೆ ನಾವು ಮನೆಯಲ್ಲಿದ್ದಾಗ ಕೇಳುವುದಿಲ್ಲ ಎನ್ನುವುದು ಸರಿಯಲ್ಲ. ಮನೆಯ ಒಳಗೆ ಮಲಗಿದ್ದಾಗ ರಸ್ತೆಯಲ್ಲಿ ಗಲಾಟೆ ಆದರೆ ಕೇಳಿಸುವುದಿಲ್ಲ ಎನ್ನುವುದು ಸರಿ . ನಾನು ಮನೆಯ ಮಹಡಿಯ ಮೇಲೆ ಮಲಗಿದ್ದು , ಗಲಾಟೆ ಕೇಳಿ ಕೆಳಗೆ ಬಂದೆ.

**5.** ಗಲಾಟೆ ನಡೆದ ಸಮಯದಲ್ಲಿ ವಿದ್ಯುತ್ಚಕ್ತಿ ಬೆಳಕು ಇರಲಿಲ್ಲ. ಆರೋಪಿ ಮೂಕಮ್ಮಳಿಗೆ ಹೊಡೆದಿದ್ದನ್ನು ನಾನು ನೋಡಿಲ್ಲ ಎನ್ನುವುದು ಸರಿಯಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ. ಆರೋಪಿಯನ್ನು ಊರಿನಿಂದ ಹೊರಗೆ ಹಾಕಬೇಕು ಎನ್ನುವ ಉದ್ದೇಶದಿಂದ ಆತನ ಮೇಲೆ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಸಿರುಗುಪ್ಪ ಆಸ್ಪತ್ರೆಗೆ ಹೋಗಿಲ್ಲ. ಗಾಯಾಳುವಿನ ಸಂಬಂಧಿಕರು ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಮೂಕಮ್ಮಳಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**